

ದೊಡ್ಡಮ್ಮ (ಎಲ್ಲರೂ ಅವಳನ್ನು ಬಾನ್ ಚಿಕ್ಕಿ ಎಂದು ಕರೆಯುತ್ತಾರೆ) ಈ ವಿಚಾರದಲ್ಲಿ ಹೆಸರುವಾಸಿಯಾಗಿದ್ದಳೆಂದು ತಿಳಿದು ಬಂತು. ಭವಾನಿ ಎನ್ನುವ ಜಗದೀಶ್ವರಿಯ ಹೆಸರಿಟ್ಟುಕೊಂಡಿದ್ದ ಆಕೆ ಸಾಕ್ಷಾತ್ ಅನ್ನಪೂರ್ಣೆಯಂತೆ ಎಲ್ಲರಿಗೂ ಉಣಿಸುತ್ತಿದ್ದಳಂತೆ. ಬೆಳಗ್ಗೆ ಮನೆಯ ತಲೆಬಾಗಿಲು ತೆರೆದೊಡನೆ ಕಾಣುವ ಬೀದಿಯ ಆಕಳು, ಭಿಕ್ಷುಕ ಮಕ್ಕಳು ಮುಂತಾದವರ ಹೊಟ್ಟೆ ತುಂಬಿಸಿ ಆಮೇಲೆ ತನ್ನ ಕುಟುಂಬದವರಿಗೆ ತಿಂಡಿ ಸಮಾರಾಧನೆ. ಅವಳ ಗಂಡ ನಾಗೇಶ ಬಹಳ ಸಣ್ಣ ಸಂಬಳದ ಮಾಸ್ತರನಾಗಿದ್ದು ಯಾವುದೇ ಹೊಲಗದ್ದೆ- ತೋಟ ಇದ್ದವನಲ್ಲ. ಚಾಳುಮನೆಯಲ್ಲಿ ಬಾಡಿಗೆಯಿದ್ದ ಅವನು ಬಾಯಿಸತ್ತವನಾಗಿದ್ದೇ ಬಾನ್ ಚಿಕ್ಕಿಗೆ ದೊಡ್ಡ ಶಕ್ತಿಯಾಗಿತ್ತು. ಅವನ ಪಗಾರಾದ ಮರುದಿನದಿಂದಲೇ ಅವಳ ಎಂಪತಿ ಕಾರ್ಯಕ್ರಮ ಜೋರಾಗುತ್ತಿತ್ತು. ಬಾನ್ ಚಿಕ್ಕಿಯ ಎಂಪತಿಯ ಶಕ್ತಿ ಎಷ್ಟಿತ್ತೆಂದರೆ ಯಾರೂ ಬಾಯಿ ಬಿಟ್ಟು ಅವಳೆದುರು ತಮ್ಮ ಕಷ್ಟಕೋಟಲೆ ಹೇಳಿಕೊಳ್ಳುವ ಅಗತ್ಯವೇ ಬೀಳುತ್ತಿರಲಿಲ್ಲ. ಬೆಳಗ್ಗೆ ದೇವಸ್ಥಾನಕ್ಕೆ ಹೋಗಿದ್ದೆ, ಮೆಟ್ಟಿಲ ಮೇಲೆ ಒಬ್ಬಳು ಹರಿದ ಕೈಚೀಲ ಹಿಡಿದು ಕೂತಿದ್ದಳು. ಮೊಕ ನೋಡಿದರೆ ಪಾಪ ಕಾಣ್ತು ಕರೆದು ತಿಂಡಿ ಕೊಟ್ಟೆ, ತಿರುಗಿ ಬರ್ತಾ ಇದ್ದಾಗ ಆಟೊ ಡ್ರೈವರನಿಗೆ ಫೋನು ಬಂತು. ಹೆಂಡ್ತಿನ ಆಸ್ಪತ್ರೆಗೆ ಸೇರಿಸಿದರಂತೆ ಪಾಪ ಕಾಣ್ತು. ಪರ್ಸಲ್ಲಿದ್ದ ದುಡ್ಡು ಕೊಟ್ಟೆ, ಓಣಿ ತುದಿಯಲ್ಲಿ ಅಪಾರ್ಟ್‌ಮೆಂಟ್ ಕಟ್ಟಡದ ವಾಚ್‌ಮನ್ ಅಳ್ತಾ ಇದ್ದ. ಏನಾಯಿತಪ್ಪ ಅಂತ ಕೇಳಿ ಡಬ್ಬದಲ್ಲಿದ್ದ ಕಿರಾಣಿ ಸಾಮಾನು ಕೊಟ್ಟು ಬಂದೆ. ಹೀಗೆ ಬಾನ್ ಚಿಕ್ಕಿ ಮನೆಯಲ್ಲಿ ಇದ್ದ ಎಲ್ಲ ಚರಾಚರ ವಸ್ತುಗಳನ್ನು ಆಕೆ ಯಾರನ್ನೂ ಕೇಳದೇ ದಾನ